ಇ) ಇಲ್ಲ. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸವಣೂರು 110 ಕೆ.ವಿ. ಸ್ಟೇಷನ್ ಕೆ.ಇ.ಬಿ. ಇಲಾಖೆಯವರು ಕೂಡಲೆ ಪ್ರಾರಂಭಿಸುವುದು

589 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರು ಮತ್ತು ಶಿಗ್ಗಾಂವ್ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ಎಷ್ಟು (ಕೆ.ವಾ. ಸ್ಟೇಷನ್) ವಿದ್ಯುತ್ ಸ್ಥಾವರಗಳಿವೆ.

ಆ) ಸದರೀ ವಿದ್ಯುತ್ ಘಟಕದಿಂದ ಇನ್‌ಕಮಿಂಗ್ ವೋಲ್ಟೇಜ್ ಎಷ್ಟು?

ಇ) ಉಭಯ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ಅಭಾವವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸವಣೂರು ತಾಲ್ಲೂಕಿಗೆ 110 ಕೆವಿ ಸ್ಟೇಷನ್ ಮಂಜೂರಾಗಿ ಎಷ್ಟು ದಿವಸಗಳಾದವು?

ಉ) ಸದರೀ ವಿದ್ಯುತ್ ಘಟಕಗಳನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಸವಣೂರು ಮತ್ತು ಶಿಗ್ಗಾಂವ್‌ಗಳಲ್ಲಿ ತಲಾ ಒಂದೊಂದು 33:11 ಕೆವಿ ವಿದ್ಯುತ್ ಸಬ್‌ಸ್ಟೇಷನ್ ಇದೆ. ಸವಣೂರಿನಲ್ಲಿರುವ ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯ 10ಎವಿಎ ಮತ್ತು ಶಿಗ್ಗಾಂವ್‌ನಲ್ಲಿರುವ ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯ 5 ಎಂವಿಎ.

ಆ) ಸದರೀ ವಿದ್ಯುತ್ ಸಬ್-ಸ್ಟೇಷನ್‌ಗಳಿಗೆ ಇನ್‌ಕಮಿಂಗ್ ವೋಲ್ಟೇಜ್ 33 ಕೆವಿ ಇರುತ್ತದೆ.

ಇ) ಹೌದು.

ಈ) ಸವಣೂರಿನಲ್ಲಿ ಹಾಲಿ ಇರುವ 33:11 ಕೆವಿ ಸಬ್-ಸ್ಟೇಷನ್‌ನ್ನು 110 ಕೆವಿ ಸ್ಟೇಷನ್ನಾಗಿ ಮೇಲ್ದರ್ಜೆಗೊಳಿಸಲು ಮಂಡಳಿಯ ತಾಂತ್ರಿಕ ಸಮಿತಿಯ ಒಪ್ಪಿಗೆ ದೊರೆತಿದ್ದು, ಮಂಡಳಿಯ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಲು ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

ಉ) ಈ ಕೆಲಸವನ್ನು 1996ನೇ ಮಾರ್ಚ್ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ.

ದ.ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಬರಲಿರುವ ಕೈಗಾರಿಕಾ ಉದ್ಯಮಗಳಿಗೆ ವಿದ್ಯುಚ್ಛಕ್ತಿ ಸರಬರಾಜು

545 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಬರುವ ಕೈಗಾರಿಕಾ ಉದ್ಯಮಿಗಳಿಗೆ ಎಷ್ಟು ಮೆಗಾ ವ್ಯಾಟ್ ವಿದ್ಯುತ್ ಅಗತ್ಯವಿದೆ.

ಆ) ಅಗತ್ಯವಿರುವ ವಿದ್ಯುಚ್ಛಕ್ತಿಯನ್ನು ಹೇಗೆ ಪೂರೈಸಲಾಗುವುದು?

ಇ) ಅಗತ್ಯವಿರುವ ವಿದ್ಯುಚ್ಛಕ್ತಿಯನ್ನು ಸರ್ಕಾರವೇ ಪೂರೈಸುತ್ತದೆಯೇ ಅಥವಾ ಕೈಗಾರಿಕೋದ್ಯಮಿಗಳು ಖಾಸಗಿಯಾಗಿ ಪೂರೈಸಲಾಗುತ್ತಿರುವರೆ?

ಶ್ರೀ. ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :